# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ **: 5827/ 2022**

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

ವಿರುದ್ಧ

ಆರೋಪಿ : ಸಂತೋಷ್.ವೈ.ಸಿ,
ಬಿನ್ ಚಂದ್ರೇಗೌಡ,
ವಯಸ್ಸು 36 ವರ್ಷಗಳು,
ವಾಸ. ಯಲ್ಲಿಯೂರು,
ದಂಡಿಗಾನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

ಕಲಂ**-313** ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತರುಗಳ ಹೇಳಿಕೆ

ಪ್ರಶ್ನೆ**-1 :** ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ ?

ಆರೋಪಿ**-1** ರವರ ಉತ್ತರ **:-**

ಪ್ರಶ್ನೆ**-2 :** ಚಾಸಾ**-01/**ಪ್ರಾಸಾ-**:01** ದೊಡ್ಡರಂಗೇಗೌಡ ತಮ್ಮ ಸಾಕ್ಷ್ಯದಲ್ಲಿ ಪ್ರುತ್ಯಕ್ಷ ಪಿರ್ಯಾಧಿ ಮತ್ತು ಪಂಚನಾಮೆ ಸಾಕ್ಷಿ ಆಗಿದ್ದು, ಚಾಸಾ-2 ರಿಂದ ಚಾಸಾ-9 ತನಗೆ ಗೊತ್ತು. ಮೃತವೆಂಕಟಸ್ವಾಮಯ್ಯ ಅಲಿಯಾಸ್ ಭೀಮಣ್ಣ ತನಗೆ ಗೊತ್ತು, ಅವರು ತನ್ನ ತಂದೆ. ದಿಃ 12-03-2022 ರಂದು

ಸಂಜೆ 5.15 ಗಂಟೆಯ ಸಮಯದಲ್ಲಿ ಕೆಎ-42-ಆರ್-9762 ಟಿವಿಎಸ್ ಎಕ್ಸ್‌ಎಲ್ ದ್ವಿಚಕ್ರ ವಾಹನದಲ್ಲಿ ಸಿದ್ದಾಪುರದಿಂದ ರಸ್ತೆಪಾಳ್ಯಕ್ಕೆ ಹೋಗಿದ್ದರು, ಸದರಿ ಸ್ಥಳದಲ್ಲಿ ತನ್ನ ತಂದೆಯು ಯುಟರ್ನ್ ತೆಗೆದುಕೊಳ್ಳಲು ರಸ್ತೆ ಯ ಬಳಿ ನಿಲ್ಲಿಸಿದ್ದು, ಎನ್.ಹೆಚ್-75 ರಸ್ತೆಯ ಬೆಂಗಳೂರು ಕಡೆಯಿಂದ ಬಂದ ಒಂದು ವರುಣಾ ಕಾರು ಕೆಎ-51-ಎಂಡಿ-8347 ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ತನ್ನ ತಂದೆಯ ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತಾರೆ. ಚಾಸಾ-9 ರವರು ಸದರಿ ವಿಚಾರವನ್ನು ತನಗೆ ಫೋನ್ ಮೂಲಕ ತಿಳಿಸಿದ್ದು, ತಾನು ಅಪಘಾತದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ವಿಚಾರ ನಿಜವಾಗಿರುತ್ತದೆ. ತನ್ನ ತಂದೆಯವರಿಗೆ ಅಪಘಾತದಿಂದಾಗಿ ಕಾಲು ಮುರಿದು ಹೋಗಿ, ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಅಪಘಾತ ಪಡಿಸಿದ ಕಾರು ಸಹ ಸ್ಥಳದಲ್ಲಿಯೇ ನಿಂತ್ತಿತ್ತು. ಅಪಘಾತದ ಸಂಬಂಧ ತಾನು ಕುದೂರು ಪೋಲಿಸರಿಗೆ ಸಂಜೆ 7.30 ಗಂಟೆಯ ಸಮಯದಲ್ಲಿ ದೂರು ದಾಖಲಿಸಿರುತ್ತೇನೆ. ನಿಪಿ-1 ದೂರಿನ ಆಧಾರದ ಮೇಲೆ ಕುದೂರು ಪೋಲಿಸರು ಅಪಘಾತವಾದ ಮಾರನೇ ದಿವಸ ಅಪಘಾತದ ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸ್ಥಳವನ್ನು ತಾನು ತೋರಿಸಿದ್ದು, ಸದರಿ ಮಹಜರ್ ಸಮಯದಲ್ಲಿ ತಾನು, ಚಾಸಾ-7 ಮತ್ತು 8 ಹಾಜರಿದ್ದು, ಪೋಲಿಸರು ತಮ್ಮಗಳ ಸಮಕ್ಷಮ ಸಂಜೆ 4.30 ರಿಂದ 5

ಗಂಟೆಯವರೆಗೆ ಮಹಜರ್ ಕ್ರಮ ಅನುಸರಿಸಿ, ಅಪಘಾತ ಪಡಿಸಿದ ಹಾಗೂ ಅಪಘಾತ ಒಳಗಾದ ವಾಹನಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ. , ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-3 :** ಚಾಸಾ**-09/**ಪ್ರಾಸಾ-**:02** ಗೀರೀಶ ತಮ್ಮ ಸಾಕ್ಷ್ಯದಲ್ಲಿ ಪ್ರತ್ಯಕ್ಷ ಸಾಕ್ಷಿ ಆಗಿದ್ದು, ದಿಃ 12-03-2022 ಸಂಜೆ 5.15 ರ ಸಮಯದಲ್ಲಿ ತಾನು ರಸ್ತೆಪಾಳ್ಯದ ಹಾಲಿನ ಡ್ಯೆರಿನ ಬಳಿ ಇದ್ದಂತಹ ಸಮಯದಲ್ಲಿ ಗಂಗಸ್ವಾಮಯ್ಯ ಎಕ್ಸ್‌ಎಲ್ ದ್ವಿಚಕ್ರ ವಾಹನವಾದ ಕೆಎ-42-ಆರ್-9762 ಯುಟರ್ನ್ ತೆಗೆದುಕೊಳ್ಳಲು ನಿಂತ್ತಿದ್ದಾಗ ಬೆಂಗಳೂರು ಕಡೆಯಿಂದ ಮಂಗಳೂರು ಹೋಗುತ್ತಿದ್ದಂತಹ ಕೆಎ-51-ಎಂ.ಡಿ-8347 ವರುಣಾ ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತದೆ. ಅಪಘಾತ ಪರಿಣಾಮ ಗಂಗಸ್ವಾಮಯ್ಯನವರಿಗೆ ತಲೆಗೆ, ಕಾಲು ಮುರಿದು, ಕೈ ಕಾಲುಗಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ತಾನು ಅಪಘಾತದ ವಿಚಾರವನ್ನು ಫೋನ್ ಮೂಲಕ ಚಾಸಾ-1 ರವರಿಗೆ ತಿಳಿಸಿರುತ್ತೇನೆ. ನಂತರ ಚಾಸಾ-1 ರವರು ಅಪಘಾತದ ಸ್ಥಳಕ್ಕೆ ಬಂದು ಮೃತರನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ರವಾನಿಸಿರುತ್ತಾರೆ. ಆ ದಿನ ಕಾರು ಚಾಲನೆ ಮಾಡುತ್ತಿದ್ದ ವ್ಯಕ್ತಿಯೇ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ

ಆಗಿರುತ್ತಾರೆಂದು ನುಡಿಯುತ್ತಾರೆ . ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-4 :** ಚಾಸಾ**-13/**ಪ್ರಾಸಾ-**:03** ಎ**.**ಪಿ**.**ಕುಮಾರ್ ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 12-03-2022 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿ.13-03-2022 ರಂದು ತನಿಖೆ ಮುಂದುವರೆಸಿ ಮೃತ ರಂಗಸ್ವಾಮಯ್ಯ ಉ. ಭಿಮಣ್ಣನವರ ಶವಾ ತನಿಖಾ ವರದಿಯನ್ನು ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಪಂಚಾಯಿತಿದಾರರಾದಾ ಚಾಸಾ-2 ರಿಂದ 5 ರವರ ಸಮಕ್ಷಮ ಬೆಳಗ್ಗೆ 7.30 ರಿಂದ 9.30 ರವರೆ ಶವ ತನಿಖೆಯನ್ನು ಕೈಗೊಂಡು ನಂತರ ವೈದ್ಯರಿಗೆ ಫಾರಂ. ನಂ. 146 ನ್ನು ಭರ್ತಿ ಮಾಡಿ ಮನವಿ ಪತ್ರವನ್ನು ಸಲ್ಲಿಸಿ ವೈದ್ಯರಿಂದ ಶವ ಪರೀಕ್ಷೆ ಆದ ನಂತರ ಮೃತ ದೇಹವನ್ನು ವಾರಸುದಾರರಿಗೆ ನೀಡಿ ಬರಲು ಹೆಚ್. ಸಿ-371 ಮಾರುತಿ ಕುಮಾರ್ ರವರಿಗೆ ತಿಳಿಸಿರುತ್ತೇನೆ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪಂಚಾಯಿತಿದಾರರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೂ ಪಂಚನಾಮೆಕ್ರಮ ಅನುಸರಿಸಿ ಪಂಚನಾಮೆ ಕಾಲದಲ್ಲಿ ಮಾಲು ಪಟ್ಟಿ ಸಂ. 102/2022 ರಂತೆ ಟಿ. ವಿ. ಎಸ್ ಎಕ್ಸೆಲ್ ಕೆಎ-42-ಆರ್ 9762 ಹಾಗೂ ಅರೋಪಿಯ ವಾಹನವಾದ ಕೆಎ-51-ಎಂಡಿ-8347 ಹುಡೈ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಅದೇ

ದಿನ ಹೆಚ್.ಸಿ ಮಾರುತಿ ಕುಮಾರ್ ರವರಿಂದ 65-ಬಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ? ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.14-03-2022 ರಂದು ಚಾಸಾ-9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.15-03-2022 ರಂದು ಅಪಘಾತ ಉಂಟು ಮಾಡಿದ ಕೆಎ-51-ಎಂಡಿ-8347 ಕಾರಿನ ಮಾಲೀಕರಿಗೆ ಕಲಂ. 133 ನೋಟಿಸ್ ಜಾರಿ ಮಾಡಿರುತ್ತೇನೆ ದಿ.16-03-2022 ರಂದು ಕಾರಿನ ಮಾಲಿಕರಾದ ಸಂತೋಷ್ ರವರು ಠಾಣೆಗೆ ಹಾಜರಾಗಿ ನೀಡಿದ ನೋಟಿಸ್ ಗೆ ಪ್ರತ್ಯುತ್ತರ ನೋಟಿಸ್ ನ್ನು ನೀಡಿರುತ್ತಾರೆ. ಸದರಿ ವಾಹನ ಮಾಲೀಕರೇ ಅರೋಪಿಯಾಗಿದ್ದು ಅರೋಪಿಯ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಂತರ ವಾಹನದ ಐ. ಎಂ. ವಿ ಪರೀಕ್ಷೆಯನ್ನು ಅನುಸರಿಸಿ ವಾಹನವನ್ನು ವಾಹನ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿ.16-03-2022 ರಂದು ಮೃತ ರಂಗಸ್ವಾಮಯ್ಯನವರ ಪಿ. ಎಂ ವರದಿಯನ್ನು ಮಾಗಡಿ ಸರ್ಕಾರಿ ಅಸ್ಪತ್ರೆಯ ವೈಧ್ಯಾಧಿಕಾರಿಯಿಂದ ಪಡೆದುಕೊಂಡಿರುತ್ತೇನೆ. ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-5 :** ಚಾಸಾ**-07/**ಪ್ರಾಸಾ**-:04** ಲಕ್ಷ್ಮಣ್ ತಮ್ಮ ಸಾಕ್ಷ್ಯದಲ್ಲಿ, ತಾನು ಅಪಘಾತ ವಾಗಿರುವ ವಿಚಾರವಾಗಿ ದಿ.13-03-2022

ರಂದು ಬಗೀನಗೆರೆ ಯುಟರ್ನ್ ಬಳಿ ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ತನ್ನ ಹಾಗೂ ಚಾಸಾ-1 ಮತ್ತು 8 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ ಸ್ಥಳ ಪಂಚನಾಮೆ ಕಾಲಕ್ಕೆ ತಮ್ಮಗಳ ಸಮಕ್ಷಮ ಕೆಎ-42-ಆರ್-9762 ವಾಹನವನ್ನು ಹಾಗೂ ವರ್ಣಾ ಕಾರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-6 :** ಚಾಸಾ**-8/**ಪ್ರಾಸಾ-**:05** ರಾಮಚಂದ್ರಯ್ಯ ತಮ್ಮ ಸಾಕ್ಷ್ಯದಲ್ಲಿ, ತಾನು ಅಪಘಾತವಾಗಿರುವ ವಿಚಾರವಾಗಿ ಈಗ್ಗೆ ಸುಮಾರು 2 ವರ್ಷಗಳ ಹಿಂದೆ ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ ತಾನು, ಚಾಸಾ-1 ಮತ್ತು ಚಾಸಾ-7 ರವರು ಇದ್ದು ಸ್ಥಳ ಪಂಚನಾಮೆಯನ್ನು ಜರುಗಿಸಿ ಸ್ಥಳ ಪಂಚನಾಮೆ ಕಾಲಕ್ಕೆ ತಮ್ಮಗಳ ಸಮಕ್ಷಮ ಟಿ. ವಿ. ಎಸ್ ಎಕ್ಸೆಲ್ ವಾಹನ 8762 ಹಾಗೂ ಕಾರಿನ ಸಂ. 8347 ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-7 :** ಚಾಸಾ**-12/**ಪ್ರಾಸಾ-**:06** ಗುರುಮೂರ್ತಿ ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ12-03-2022 ರಂದು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 7.30 ಗಂಟೆಯ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು

ಠಾಣಾ ಮೊಕದ್ದಮ್ಮೆ ಸಂಖ್ಯೆಃ121/2022 ಕಲಂ-279 ಮತ್ತು 304(ಎ) ರ ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿ**-1** ರವರ ಉತ್ತರಃ**-**

ಪ್ರಶ್ನೆ**-8 :** ನೀವುಗಳು ಹೇಳುವುದು ಏನಾದರೂ ಇದೆಯೇ?

ಆರೋಪಿ**-1** ರವರ ಉತ್ತರ **:-**

ಪ್ರಶ್ನೆ**-9:** ನಿಮ್ಮಗಳ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

ಆರೋಪಿ**-1** ರವರ ಉತ್ತರ **:-**

**(**ಈ ಮೇಲ್ಕಂಡ ಆರೋಪಿತರ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಹೇಳಿ**,** ಕೇಳಿ**,** ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ **17-12-2025** ರಂದು ಸಹಿ ಮಾಡಿರುತ್ತಾರೆ**)**

**(** ಧನಲಕ್ಷ್ಮೀ ಎಂ **)**
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ**,**

**1** ನೇ ಆರೋಪಿಯ ಸಹಿ